# ಮುಖ್ಯ ಶಿಕ್ಷಕರ ವೇದಿಕೆ ಕಾರ್ಯಕ್ರಮ - ಟಿಪ್ಪಣಿ  ಸೆಪ್ಟಂಬರ್ -2013

ಶಾಲಾ ನಾಯಕತ್ವವು ಶಿಕ್ಷಣದ ಗುಣಮಟ್ಟದ ಮೇಲೆ ಪರಿಣಾಮ ಬೀರುವ ಪ್ರಮುಖ ಅಂಶವೆಂದು ಸಂಶೋಧನೆಗಳು ತಿಳಿಸಿವೆ. ಹೀಗಿದ್ದರೂ ಸಹ ಉತ್ತಮ ನಾಯಕತ್ವ ಇರುವ ಶಾಲೆಗಳಲ್ಲಿಯೂ ಇಂದು ಕಳಪೆ ಮಟ್ಟದ ಕಲಿಕಾ ಫಲಿತಾಂಶವನ್ನು ಕಾಣಲಾಗುತ್ತಿದೆ. ಶಾಲಾ ಮುಖ್ಯಶಿಕ್ಷಕರನ್ನು ಶಾಲಾ ನಾಯಕರನ್ನಾಗಿಸಲು ಸಹಾಯಮಾಡುವ ಶೈಕ್ಷಣಿಕ ನಾಯಕತ್ವ ಮತ್ತು ನಿರ್ವಹಣೆ ಅಭಿವೃದ್ಧಿ ಕಾರ್ಯಕ್ರಮವು ಶಾಲೆಗಳ ಪರಿಣಾಮಕಾರಿತ್ವವನ್ನು ವೃದ್ಧಿಸಲು ಸಹಾಯ ಮಾಡುತ್ತದೆ. ಮುಖ್ಯ ಶಿಕ್ಷಕರ ವೇದಿಕೆ ಕಾರ್ಯಕ್ರಮದಡಿಯಲ್ಲಿ ಶಾಲಾ ಮುಖ್ಯ ಶಿಕ್ಷಕರಿಗೆ ಶಾಲಾ ನಾಯಕತ್ವ ಅಭಿವೃದ್ಧಿಯನ್ನು ಯೋಜಿಸಲಾಗಿದ್ದು ಇಲ್ಲಿ ಕಾರ್ಯಾಗಾರಗಳು, ಅಂತರ್ ಜಾಲ ಸಮಾಲೋಚನೆಗಳ ಮೂಲಕ ಸಹವರ್ತಿ ಕಲಿಕೆ ಹಾಗೂ ಹಂಚಿಕೆ ನಡೆಸಲಾಗುತ್ತದೆ.

## ಶಾಲಾಭಿವೃದ್ಧಿ

ಶಾಲಾಭಿವೃದ್ದಿಯು , ಶಾಲೆಯ ಪರಿಣಾಮಕಾರಿತ್ವಕ್ಕೆ ಪೂರಕವಾಗುವ ಅಂಶಗಳನ್ನು ( ಇವುಗಳನ್ನು ಶಾಲಾಭಿವೃದ್ಧಿ ಅಂಶಗಳೆಂದು ಕರೆಯಲಾಗುತ್ತದೆ) ಮತ್ತು ಈ ಅಂಶಗಳ ಜಟಿಲ ಅಂತರ್-ಸಂಬಂದಗಳನ್ನು ಅರ್ಥೈಸಿಕೊಳ್ಳುವುದನ್ನು ಒಳಗೊಂಡಿದೆ. ಶಾಲಾ ನಾಯಕತ್ವದ ಮೇಲೆ ಮಾಹಿತಿಗಳ ಜ್ಞಾನಕೋಶ ಉಪಲಬ್ದವಿದ್ದು ಇದು ಶಾಲಾಭಿವೃದ್ದಿ ಅಂಶಗಳ ಪಾತ್ರ ಮತ್ತು ಸಂಬಂಧಗಳ ಕುರಿತು ಚರ್ಚಿಸುತ್ತದೆ . ವ್ಯವಸ್ಥಿತ ಶಾಲಾಭಿವೃದ್ಧಿ ಸಾಧಿಸಲು ಪ್ರತೀ ಶಾಲೆಯಲ್ಲಿ ಆ ಶಾಲೆಯ ಮೇಲೆ ಪರಿಣಾಮ ಬೀರುವ ಶಾಲಾಭಿವೃದ್ದಿ ಅಂಶಗಳ ಪರಿಣಾಮವನ್ನು ವಿಶ್ಲೇಷಣೆ ಮಾಡಬೇಕಾಗುತ್ತದೆ ಮತ್ತು ಈ ಕುರಿತು ತನ್ನ ಭಾಗೀದಾರರೊಡನೆ ಚರ್ಚಿಸಿ ಸಹಭಾಗಿತ್ವದ ಮೂಲಕ ಎಲ್ಲರಿಗೂ ಹಂಚಿಕೆಯಾದ ಸಾಮಾನ್ಯ ತಿಳುವಳಿಕೆಯನ್ನು ಹೊಂದುವುದನ್ನು ಪ್ರೋತ್ಸಾಹಿಸಬೇಕು. ಕಾರ್ಯಸಾಧ್ಯವಾದ ಮತ್ತು ಶಾಲೆಗೆ ನಿರ್ದಿಷ್ಟ ವಾದ ಅಭಿವೃದ್ದಿ ಯೋಜನೆಗಳನ್ನು ಒಟ್ಟುಗೂಡಿ ಯೋಜಿಸಬೇಕು , ಈ ಯೋಜನೆಗಳನ್ನು ಅನುಷ್ಠಾನ ಮಾಡಬೇಕು. ಯಶಸ್ಸು ಮತ್ತು ವಿಫಲತೆಗಳ ಕುರಿತು ಚಿಂತನೆ ನಡೆಸುತ್ತಾ ಕಲಿಯಬೇಕು ಮತ್ತು ಹೆಚ್ಚಿನ ಪರಿಣಾಮಕಾರಿತ್ವಕ್ಕಾಗಿ ಸರಿಪಡಿಸುವ ಮತ್ತು ತಡೆಗಟ್ಟುವ ಕಾರ್ಯಗಳನ್ನು ಕೈಗೊಳ್ಳಬೇಕು. ಈ ರೀತಿಯಲ್ಲಿ ಶಾಲಾಭಿವೃದ್ದಿಯು ನಾವೆಲ್ಲಿದ್ದೇವೆ ( ಸಂದರ್ಭ) ಮತ್ತು ಎಲ್ಲಿಗೆ ತಲುಪಲು ಬಯಸುತ್ತೇವೆ (ಕಾಣ್ಕೆ) ಎಂಬುದನ್ನು ತಿಳಿದುಕೊಳ್ಳುವ ಪ್ರಕ್ರಿಯೆಯಾಗಿದೆ

ಶಾಲೆಯು ಒಂದು ಪ್ರಮುಖ ಸಾಮಾಜಿಕ ಸಂಸ್ಥೆಯಾಗಿದ್ದು , ಸಮುದಾಯದ ಅಬಿವೃದ್ದಿಯು ಶಾಲೆಯ ಮೇಲೆ ತಕ್ಷಣ ಪರಿಣಾಮ ಬೀರುತ್ತದೆ, ಹಾಗೆಯೇ ಸಮಾಜದ ಮೇಲೆ ಹೆಚ್ಚಿನ ಪರಿಣಾಮ ಬೀರುತ್ತದೆ. (ಉದಾಹರಣೆಗೆ : ನಮ್ಮ ಶಿಕ್ಷಣಶಾಸ್ತ್ರವು ಮಕ್ಕಳಿಗೆ ಪ್ರಾಥಮಿಕ ಶಾಲೆಯಲ್ಲಿನ ಭೋದನಾ ಮಾಧ್ಯಮವು ಕಡ್ಡಾಯವಾಗಿ ಮಗುವಿನ ಮಾತೃ ಭಾಷೆಯಲ್ಲಿಯೇ ಇರಬೇಕು ಎಂಬುದಾಗಿ ಹೇಳುತ್ತಿದ್ದರರೂ ಸಹ , ಇಂದು ಒಂದನೇ ತರಗತಿಯಲ್ಲಿ ಇಂಗ್ಲೀಷ್ ನ್ನು ಪ್ರಥಮ ಭಾಷೆಯಾಗಿಸಬೇಕೆನ್ನುವ ಹೆಚ್ಚಿನ ಒತ್ತಡ ಹೇರಲಾಗುತ್ತಿದೆ ) ಇದರ ಅರ್ಥ , ಶಾಲಾಭಿವೃದ್ದಿ ಪ್ರಕ್ರಿಯೆಯು ಶಾಲೆಯೊಳಗಿನ ಭಾಗೀದಾರರಾದ ಶಿಕ್ಷಕರು, ಮಕ್ಕಳು, ಸಹಾಯಕ ಸಿಬ್ಬಂದಿ ಹಾಗೂ ಶಾಲೆಯ ಹೊರಗಿನ ಭಾಗೀದಾರರಾದ ಪೋಷಕರು, ಸಮುದಾಯ ಪ್ರತಿನಿಧಿಗಳು , ಮಾಧ್ಯಮ ಮತ್ತು ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯ ಲ್ಲಿರುವ ಶೈಕ್ಷಣಿಕ ಹಾಗು ಆಡಳಿತಾತ್ಮಕ ಅಧಿಕಾರಿಗಳು ಹೀಗೆ ಎಲ್ಲ ಭಾಗೀದಾರರ ಆಕಾಂಕ್ಷೆಗಳು ಮತ್ತು ಆದ್ಯತೆಗಳೊಂದಿಗೆ ನಿರಂತರ ಹೊಂದಾಣಿಕೆ ಮಾಡಿಕೊಳ್ಳಬೇಕಾದ ಅವಶ್ಯಕತೆಯಿದೆ.

ಸಮಾಜ ನಿಂತ ನೀರಲ್ಲ , ಬದಲಾಗಿ ನಿರಂತರವಾಗಿ ಹೊಸ ಹೊಸ ಸವಾಲುಗಳು ಬರುತ್ತಲೇ ಇರುತ್ತವೆ . ಆದ್ದರಿಂದ ಶಾಲಾ ನಾಯಕತ್ವವು ತನ್ನ ಸಂದರ್ಭ ಮತ್ತು ಸವಾಲುಗಳನ್ನು ನಿರಂತರವಾಗಿ ಪುನರ್ ವ್ಯಾಖ್ಯಾನ ಮಾಡಬೇಕಿದೆ. ಉದಾಹರಣೆಗೆ : ಇಂಗ್ಲೀಷ್ ನ ಮಹತ್ವ ಕ್ಕೆ ಒತ್ತು ಕೊಡುವ ಅಂಶಗಳಲ್ಲಿ ಜಾಗತೀಕರಣವು ಒಂದು ಪ್ರಮುಖ ಅಂಶವಾಗಿದ್ದು , ಶಾಲಾ ನಾಯಕರು ಇಂತಹ ದೊಡ್ಡ ಪ್ರಕ್ರಿಯೆಗಳ ಕುರಿತು ಸೂಕ್ಷ್ಮ ತಿಳುವಳಿಕೆಯನ್ನು ಹೊಂದಿರಬೇಕು ಈ ಮೂಲಕ ಸೂಕ್ಷ್ಮ ಸಂದರ್ಭಗಳಿಗೆ ಅರ್ಥಬದ್ಧ ಪ್ರತಿಕ್ರಿಯೆ ನೀಡಲು ಸಹಾಯವಾಗುತ್ತದೆ ಖಾಸಗಿ ಶಾಲೆಗಳು, ಮನೆಪಾಠಗಳ ಕುರಿತ ಒತ್ತಡ ಹಾಗು ಮಕ್ಕಳ ಮೇಲೆ ಪ್ರಭಾವ ಬೀರುವಲ್ಲಿ ಹೆಚ್ಚುತ್ತಿರುವ ಮಾಧ್ಯಮಗಳ ಪಾತ್ರ ದ ಕುರಿತು ತಿಳುವಳಿಕೆಯನ್ನು ಹೊಂದಿ ಪರಿಣಾಮಕಾರಿಯಾಗಿ ಪ್ರತಿಕ್ರಿಯೆ ನೀಡಬೇಕಾಗುತ್ತದೆ

ಶಾಲಾಭಿವೃದ್ದಿ ಪ್ರಕ್ರಿಯೆಗಳ ಕುರಿತು ಅರ್ಥೈಸಿಕೊಳ್ಳುವ ಲ್ಲಿ ಮತ್ತು ಎಲ್ಲಾ ಭಾಗೀದಾರರೊಂದಿಗೆ ಸೇರಿ ಕೆಲಸ ಮಾಡುತ್ತಾ ಎಲ್ಲರೂ ಸೇರಿ ಕೈಗೊಳ್ಳುವ ಕಾರ್ಯವನ್ನು ಮಾಡಲು ಹಂಚಿಕೆಯ ಅರ್ಥವನ್ನು ರೂಪಿಸುವ ಪ್ರಮುಖ ಪಾತ್ರ ಮುಖ್ಯ ಶಿಕ್ಷಕರದ್ದಾಗಿರುತ್ತದೆ.

## ಮಿಶ್ರ ಕಲಿಕೆಯ ಮೂಲಕ ಶಾಲಾ ನಾಯಕತ್ವಕ್ಕೆ ವ್ಯವಸ್ಥಿತ ಕಾರ್ಯಕ್ರಮ

ನಾಯಕತ್ವದ ಸಾಮರ್ಥ್ಯಗಳು ಚಿಂತನೆಯ ಅಭ್ಯಾಸದ ಮೂಲಕ ಅತ್ಯುತ್ತಮವಾಗಿ ನಿರ್ಮಾಣವಾಗುತ್ತವೆ. ಉತ್ತಮ ನಾಯಕರು ಯಾವ ಕಾರ್ಯ ಯಶಸ್ವಿಯಾಯಿತು ಮತ್ತು ಏಕೆ , ಯಾವುದು ವಿಫಲವಾಯಿತು ಮತ್ತು ಅದಕ್ಕೆ ಕಾರಣಗಳೇನು ಎಂದು ತಿಳಿಯಲು ತಮ್ಮ ನಾಯಕತ್ವದ ಮತ್ತು ನಿರ್ವಹಣೆಯ ಅನುಭವಗಳ ಕುರಿತು ಚಿಂತನೆ ನಡೆಸುತ್ತಾರೆ. ಶಾಲೆ ಈ ರೀತಿಯ ಸಾಮಾರ್ಥ್ಯಗಳನ್ನು ಬೆಳೆಸಿಕೊಳ್ಳಲು ಅವಕಾಶ ನೀಡುತ್ತದೆಯಾದರೂ ಚಿಂತನಾ ಪ್ರಕ್ರಿಯೆಯನ್ನು ಬೆಂಬಲಿಸಲು ಶಿಕ್ಷಣದ ತತ್ವಗಳು, ಶಿಕ್ಷಣದ ಸಾಮಾಜಿಕತೆ, ಮಕ್ಕಳ ಮನೋಶಾಸ್ತ್ರ ಕ್ಷೇತ್ರಗಳಿಂದ ಮಾಹಿತಿ ಮತ್ತು ಶೈಕ್ಷಣಿಕ ಸಂಶೋಧನೆಗಳ ಒಳನೋಟಗಳ ಅವಶ್ಯಕತೆಯಿದೆ ಆದ್ದರಿಂದ ಕಾರ್ಯಕ್ರಮವು ಕೇವಲ ಶಾಲಾ ನಾಯಕತ್ವ ಅಭಿವೃದ್ಧಿಯ ಕುರಿತ "ವಿಷಯ ಜ್ಞಾನವನ್ನು" ಒದಗಿಸುವ "ತರಬೇತಿ" ಕಾರ್ಯಕ್ರಮವಾಗಬಾರದು

ಚಿಂತನೆ ವೈಯಕ್ತಿಕ ಮತ್ತು ಸಾಮೂಹಿಕವಾಗಿರಬೇಕು. ಮಿಶ್ರ ಮಾದರಿಯನ್ನು ಬಳಸುವ ಕಲಿಕಾ ಕಾರ್ಯಕ್ರಮವು (ಮುಖ್ಯ ಶಿಕ್ಷಕರು ಭೌತಿಕವಾಗಿ ಭೇಟಿಯಾಗುವ ಕಾರ್ಯಾಗಾರಗಳು ಮತ್ತು ಕಲಿಕಾ ಅವಕಾಶಗಳನ್ನು ಒದಗಿಸುವಂತಹ ಸಂಪರ್ಕ ಮಾಧ್ಯಮಗಳ ಮೂಲಕ ನಡೆಯುವ ಮಾತುಕತೆಗಳನ್ನು ಒಂದೆಡೆ ತರುವುದು) ವೈಯಕ್ತಿಕವಾಗಿ ಮತ್ತು ಸಾಮೂಹಿಕವಾಗಿ ಚಿಂತನೆ ನಡೆಸಲು ಮುಖ್ಯ ಶಿಕ್ಷಕರಿಗೆ ಸಹಾಯ ಮಾಡುತ್ತದೆ. ಈ ರೀತಿಯ ತರಬೇತಿ ವಿಧಾನವು ಶಿಬಿರಾರ್ಥಿಗಳಿಗೆ "ನಿಮ್ಮ ಶಾಲೆಯ ಅಭಿವೃದ್ಧಿ" ಕೆಲಸಕ್ಕೆ ಪ್ರಾಯೋಗಿಕವಾಗಿ ಸಹಾಯ ಮಾಡಲು ಅವಕಾಶ ಒದಗಿಸುತ್ತದೆ. ಇದು ಈ ಕೆಳಕಂಡ ಪ್ರಕ್ರಿಯೆಗಳ ಮೂಲಕ ಸಾಧ್ಯವಾಗುತ್ತದೆ

1. ಶಾಲೆಯ ನಾಯಕನ ನಿಮ್ಮ ಪಾತ್ರವು ಕಾಣ್ಕೆ ರೂಪಿಸುವುದು, ಯೋಜನೆ ರೂಪಿಸುವುದು ಮತ್ತು ತಮ್ಮ ಶಿಕ್ಷಕರ ಅಭಿವೃದ್ಧಿಯ ಅವಶ್ಯಕತೆಗಳಿಗೆ ಬೆಂಬಲ ನೀಡುವುದು, ಶಿಕ್ಷಕರ ಉಪಕ್ರಮಗಳಿಗೆ ವ್ಯವಸ್ಥಿತ ಬೆಂಬಲ ಒದಗಿಸುವುದರ ಮೂಲಕ ಅವರನ್ನು ಸ್ವತಂತ್ರ ವಿಚಾರವಾದಿಗಳು ಮತ್ತು ಶಾಲಾಭಿವೃದ್ದಿಯ ಕೊಡುಗೆದಾರರನ್ನಾಗಿ ಮಾಡುವುದು - ಈ ಮುಂತಾದವುಗಳನ್ನು ಒಳಗೊಂಡಿರುತ್ತದೆ ಎಂದು ಅರ್ಥೈಸಿಕೊಳ್ಳುವುದು.

2. ಶಾಲೆಯ ನಿರ್ವಹಣೆಯಲ್ಲಿ ಪೋಷಕರು ಸೂಕ್ತವಾಗಿ ಭಾಗವಹಿಸುವಂತೆ ಪ್ರೋತ್ಸಾಹ ನೀಡುವುದು, ಸಾಧ್ಯತೆಗಳನ್ನು ಗುರುತಿಸುವುದು ಮತ್ತು ಸವಾಲುಗಳನ್ನು ನಿಭಾಯಿಸುವುದು.

3. ಕಲಿಕೆಯ ಬಹುಕ್ಷೇತ್ರಗಳ ವ್ಯಾಪ್ತಿಯಲ್ಲಿಎಲ್ಲಾ ಮಕ್ಕಳಿಗೆ ಅವರ ಆಸಕ್ತಿಯ ಮತ್ತು ಸಾಮರ್ಥ್ಯದ ಕ್ಷೇತ್ರಗಳಲ್ಲಿ ಯಶಸ್ಸು ಗಳಿಸಲು ಅವಕಾಶ ನೀಡುವುದು

4. ಈ ಮೇಲಿನ ಪ್ರಕ್ರಿಯೆಗಳಲ್ಲಿ ಬೆಂಬಲ ನೀಡಲು ಮತ್ತು ಪಡೆಯುವ ನಿಟ್ಟಿನಲ್ಲಿ ಶಾಲಾ ವ್ಯವಸ್ಥೆಯಲ್ಲಿರುವ ಇತರೆ ಎಲ್ಲರೊಂದಿಗೆ ಕೂಡಿ ಕೆಲಸ ಮಾಡುವುದು (ಶೈಕ್ಷಣಿಕ ಮತ್ತು ಆಡಳಿತಾತ್ಮಕ ಬೆಂಬಲ ಸಂಸ್ಥೆಗಳು)

## ಮುಖ್ಯ ಶಿಕ್ಷಕರ ವೇದಿಕೆಯ ಉದ್ದೇಶಗಳು :

ಮುಖ್ಯಶಿಕ್ಷಕರ ವೇದಿಕೆ ಮೂಲಕ ಮುಖ್ಯಶಿಕ್ಷಕರಿಗೆ ತರಬೇತಿ ಯೋಜಿಸುತ್ತಿರುವ ಉದ್ದೇಶಗಳು :

1. ಮುಖ್ಯ ಶಿಕ್ಷಕರು ಇತರೆ ಮುಖ್ಯಶಿಕ್ಷಕರೊಡನೆ ಮತ್ತು BEO/BRC/DIET ಕಚೇರಿಗಳೊಡನೆ ಸಂವಹನ ಸಾಧಿಸಲು ಕಂಪ್ಯೂಟರ್ ಮತ್ತು ಇಮೇಲ್ ಬಳಸುವುದುನ್ನು ಕಲಿಯುವುದು. ಈ ಸಂವಹನವು ಶೈಕ್ಷಣಿಕ & ಆಡಳಿತಾತ್ಮಕವಾದ ಸಲಹೆ ಮತ್ತು ಬೆಂಬಲವನ್ನು ತ್ವರಿತವಾಗಿ ಮತ್ತು ಉಚಿತ ಪಡೆದುಕೊಳ್ಳು ಸಾಧ್ಯವಾಗತ್ತದೆ . ಶಾಲೆಗಳಿಗೆ ಮಾರ್ಗದರ್ಶನ ನೀಡುವ ಸಂಸ್ಥೆಗಳಿಗೂ ಸಹ ಸಹಾಯಕವಾಗುತ್ತದೆ.

2. ಶಾಲಾ ಹಂತದ ಚಟುವಟಿಕೆಗಳ ಮಾಹಿತಿ, ಶಿಕ್ಷಕರು ಹಾಗು ಮಕ್ಕಳ ಮಾಹಿತಿ, ಕಾರ್ಯಕ್ರಮಗಳ ಮಾಹಿತಿ ಶಿಕ್ಷಕರ ಅಭಿವೃದ್ದಿ, ಶಾಲೆ & ಸಮುದಾಯದ ನಡುವಿನ ಸಂಬಂದಗಳ ಮಾಹಿತಿಗಳ ಬಗ್ಗೆ ಸಾಮಾನ್ಯ ದಾಖಲೆಗಳನ್ನು ಸಿದ್ದಪಡಿಸುವುದು. ಈ ಮೂಲಕ ಪಾರದರ್ಶಕ ಆಡಳಿತ ನೀಡುವುದು.

3. ಶಾಲೆ-ಶಾಲೆಗಳ ಮುಖ್ಯಶಿಕ್ಷಕರ ನಡುವೆ ಸಂಪರ್ಕಜಾಲ ಬೆಸೆಯುವ ಮೂಲಕ ಸಹವರ್ತಿ ಕಲಿಕೆ ಮತ್ತು ಹಂಚಿಕೆಗೆ ಮುಖ್ಯಶಿಕ್ಷಕರನ್ನು ತೊಡಗಿಸುವುದು. ಈ ಮೂಲಕ ಹೊಸ ಮುಖ್ಯಶಿಕ್ಷಕರು ಹಿರಿಯ ಅನುಭವಿ ಮುಖ್ಯಶಿಕ್ಷಕರ ಮೂಲಕ ಕಾರ್ಯನಿರ್ವಹಣೆಯ ವಿಧಾನಗಳನ್ನು ಕಲಿಯಲು ಉಪಯುಕ್ತ ವಾಗುತ್ತದೆ.

4. ಅಂತರ್ಜಾಲದಲ್ಲಿ ಶೈಕ್ಷಣಿಕ ಸಂಪನ್ಮೂಲಗಳನ್ನು ಗುರುತಿಸಿ ವಿಷಯ ಶಿಕ್ಷಕರಿಗೆ ಸೂಕ್ತ ಮಾರ್ಗದರ್ಶನ ಮತ್ತು ಬೆಂಬಲ ನೀಡುವುದು. ವಿಷಯ ಶಿಕ್ಷಕರೂ ಸಹ ವಿಷಯದ ಬೋಧನೆ-ಕಲಿಕೆಯಲ್ಲಿ ICT ಯನ್ನು ಬಳಸಿಕೊಳ್ಳುವ ನಿಟ್ಟಿನಲ್ಲಿ ತರಬೇತಿಯನ್ನು ಹೊಂದಿದ್ದರಿಂದ, ಮುಖ್ಯ ಶಿಕ್ಷಕರ ಈ ಸಮಾರ್ಥ್ಯಾಭಿವೃದ್ಧಿ ಯು ತನ್ನ ಶಾಲೆಯ ಶಿಕ್ಷಕರಿಗೆ ಮಾರ್ಗದರ್ಶನ ನೀಡುವ ಮತ್ತು ಅವರನ್ನು ಕಲಿಕೆಗೆ ಪೂರಕವಾಗಿ ಪ್ರಯೋಗಾಲಯದ ಬಳಕೆಯನ್ನು ಮಾಡಲು ಮನವೊಲಿಸಲು ತಯಾರು ಮಾಡುತ್ತದೆ.

5. ನಿರಂತರ ಕಲಿಕೆಗಾಗಿ ಮಿಶ್ರ ಕಲಿಕಾ ವಿಧಾನ ವನ್ನು ಬಳಸಲು ಕಲಿಯುವುದು - ಸ್ವ-ಕಲಿಕೆ, ಸಹವರ್ತಿ ಕಲಿಕೆ, ಮಾರ್ಗದರ್ಶನ, ಪಡೆದುಕೊಳ್ಳುವ, ಕೇಳುವ ಮತ್ತು ಹಂಚಿಕೊಳ್ಳುವ .

## ಬಹು ಹಂತಗಳ ಮಾದರಿ ( Cascade )

ಈ ಕಾರ್ಯಕ್ರಮವು ಒಂದು ಹಂತದಿಂದ ಮುಂದಿನ ಹಂತದ ತರಬೇತಿ ಮಾದರಿಯಲ್ಲಿ ನಿರ್ವಹಿಸಲ್ಪಡುತ್ತದೆ ಇದಕ್ಕಾಗಿ 4 ಜನರ ಮುಖ್ಯ ಸಂಪನ್ಮೂಲ ವ್ಯಕ್ತಿಗಳ (2 ಮುಖ್ಯ ಶಿಕ್ಷಕರು , 1 DIET ನ ಶೈಕ್ಷಣಿಕ ನಾಯಕತ್ವ ನಿರ್ವಹಣೆ ಕ್ಷೇತ್ರದ ಸಂಪನ್ಮೂಲ ವ್ಯಕ್ತಿಗಳು / 1 ಪ್ರೌಢ ಶಾಲಾ ಮಟ್ಟದ BRP ) ತಂಡ (ಪ್ರತಿ ಜಿಲ್ಲೆಗೆ ಒಂದು ತಂಡ) ರಾಜ್ಯಮಟ್ಟದಲ್ಲಿ / ವಿಭಾಗೀಯ ಮಟ್ಟದಲ್ಲಿ ತರಬೇತಿ ನೀಡುವುದು. ನಂತರ ಈ ಮುಖ್ಯ ಸಂಪನ್ಮೂಲ ವ್ಯಕ್ತಿಗಳ ತಂಡವು ತಮ್ಮ ಜಿಲ್ಲೆಯ ಮುಖ್ಯ ಶಿಕ್ಷಕರೊಂದಿಗೆ 5 ದಿನಗಳ ಕಾರ್ಯಾಗಾರವನ್ನು ನಡೆಸುತ್ತದೆ ಮತ್ತು ನಂತರ ಅಂತರ್ಜಾಲದ ಮೂಲಕ ಮುಂದುವರೆಯುತ್ತದೆ.